ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 3

(ದಿನಾಂಕ 18-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನಾನು ಮತ್ತು ವಾದಿ ಹಾಗೂ ವಾದಿ ಪರ ಇತರೆ ಸಾಕ್ಷಿದಾರರು ಒಂದೇ ಗ್ರಾಮದವರು ಎಂದರೆ ಸರಿ. ವಾದಿಯು ನನಗೆ ಮಾವನಾಗಬೇಕು. ಅವರು ಸಾಕ್ಷಿ ಹೇಳಲು ನನಗೆ ಕರೆದಿದ್ದರಿಂದ ನಾನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುತ್ತೇನೆ. ಈ ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿದ್ದಾರೆನ್ನುವುದು ನನಗೆ ಗೊತ್ತಿಲ್ಲ.ದಾವಾ ಸರ್ವೆ ನಂಬರ್ ಒಟುಟ ಎಷ್ಟು ವಿಸ್ತೀರ್ಣ ಇದೆ ಎನ್ನುವುದು ನನಗೆ ಗೊತ್ತಿಲ್ಲ ಆದರೆ 4 ಎಕರೆ ಜಮೀನು ವಾದಿ ಖರೀದಿಸಿರುವುದು ನನಗೆ ಗೊತ್ತು. ವಾದಿಯು ದಾವಾ ಜಮೀನನ್ನು ವಾಮಣ್ಣ ಇವರಿಂದ ಖರೀದಿ ಮಾಡಿರುತ್ತಾರೆ. ವಾದಿ ಯಾವ ದಿನಾಂಕದಂದು ಖರೀದಿಸಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ, ವಾಮಣ್ಣ ಇವರು 1970 ರಲ್ಲಿ ಖರೀದಿಸಿದ್ದು ಅವರಿಂದ ವಾದಿಯು 1971 ನೇ ಇಸ್ವಿಯಲ್ಲಿ ಖರೀದಿಸಿದ್ದಾರೆನ್ನುತ್ತಾರೆ. ವಾಮಣ್ಣ ಇವನು ಸದರಿ ಆಸ್ತಿಯನ್ನು ವಿರುಪಣ್ಣ ಇವರಿಂದ ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ವಿರುಪಣ್ಣ ಹೆಸರಿನಲ್ಲಿ ಮತ್ತು ವಾಮದೇವ್ ಹೆಸರಿನಲ್ಲಿ ಪಹಣಿಗಳು ಇರಲಿಲ್ಲವಾದ್ದರಿಂದ ಜಮೀನನ್ನು ಖರೀದಿಸಲು ಬರುವುದಿಲ್ಲವೆಂದರೆ ಸಾಕ್ಷಿಯು ಪಹಣಿ ಇರಲಿಲ್ಲವೆಂದರೆ ಆಸ್ತಿಯನ್ನು ಖರೀದಿಸಲು ಬರುವುದಿಲ್ಲಾಂತ ಹೇಳುತ್ತಾರೆ. ಆ ಕಾರಣದಿಂದಾಗಿ ವಾದಿಯು ಖರೀದಿಪತ್ರವನ್ನು ಸುಳ್ಳು ಸೃಷ್ಟಿ ಮಾಡಿರುತ್ತಾನೆಂದರೆ ಸರಿಯಲ್ಲ. ವಾದಿಯು ಪಹಣಿಗಳಿಲ್ಲದೇ ಖರೀದಿ ಪತ್ರ ಸೃಷ್ಟಿ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ಇದ್ದರೂ ಇರಬಹುದು ಎನ್ನುತ್ತಾರೆ.

ದಾವಾಸ್ತಿಯು ಮೂಲತಃ ಬೆಳಗಿ ಚನ್ನಬಸವ್ವ ಇವರ ಹೆಸರಿನಿಂದ ಬಂದಿರುತ್ತದೆಂದರೆ ಸರಿ. ದಾವಾ ಸರ್ವೆ ನಂಬರ್ ಒಟ್ಟು ಕ್ಷೇತ್ರವನ್ನು ಪ್ರತಿವಾದಿಯ ವಂಶಸ್ಥರು ಪಾಲುವಿಭಾಗ ಮಾಡಿಕೊಂಡು ಹಂಚಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಯರು

ಸ್ವಾಧೀನದಲ್ಲಿರುತ್ತಾರೆಂದರೆ ಇರಬಹುದು. ದಾವಾಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿರುವುದರಿಂದ ಅವನು ದಾವಾಸ್ತಿಯಲ್ಲಿ ಅಕ್ರಮ ಪ್ರವೇಶ ಮಾಡಿರುವುದಿಲ್ಲವೆಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ವಾದಿಯು ನನಗೆ ಸಾಕ್ಷಿ ನುಡಿಯಲು ಕರೆದಿದ್ದರಿಂದ ಅವನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ